

ತಿಳಿನೀರಿನ ಸರೋವರ ಲಾಚ್ ನೆಸ್

ದಂಡೆಯುದ್ದಕ್ಕೂ ಸೊಗಸಾಗಿ ಬೆಳೆಸಿದ್ದಾರೆ. ನದಿಯ ಎರಡೂ ಬದಿಯಲ್ಲಿ ಬೆಂಚುಗಳು, ಅರ್ಧರ್ಧ ಕಿಲೋಮೀಟರ್‌ಗೆ ಒಂದೊಂದರಂತೆ ನದಿ ದಾಟಲು ಕಮಾನಿನ ಸೇತುವೆಗಳು ತುಂಬಾ ಸುಂದರವಾಗಿವೆ.

ನಾವು ಪ್ರವಾಸಿಗರು ಎಂದು ನಮ್ಮನ್ನು ನೋಡಿದ ಕೂಡಲೇ ಮುಗುಳ್ನಕ್ಕು 'ನಮ್ಮ ದೇಶ ನಿಮಗಿಷ್ಟವಾಯ್ತೇ, ಏನೇನು ನೋಡಿದಿರಿ' ಇತ್ಯಾದಿ ವಿಚಾರಿಸಿಕೊಳ್ಳುವ, ನನ್ನ ಮಗಳಿಗೆ ತಿಂಡಿ ಪೊಟ್ಟಣ ತಂದುಕೊಡುವ, ನಮ್ಮ ಫೋಟೊ ಕ್ಲಿಕ್ಕಿಸಿಕೊಡುವ ಸ್ನೇಹಪರ ಜನ ಸಂಗ್ರಹಾಲಯದ ದಾರಿಯುದ್ದಕ್ಕೂ ಸಿಕ್ಕರು. ಈ ಮಣ್ಣು ನಮ್ಮದು, ಈ ಗಾಳಿ ನಮ್ಮದು, ಕಲಕಲನೆ ಹರಿಯುತಿಹ ನೀರು ನಮ್ಮದು... ಎಂಬ ಚಿತ್ರಸಾಹಿತಿ ಆರ್. ಎನ್. ಜಯಗೋಪಾಲ್‌ರ ಸಾಲುಗಳನ್ನು ಈ ಜನ ಅಕ್ಷರಶಃ ಭಾವಿಸಿದ್ದಾರೆನಿಸಿತು. ನದಿಯನ್ನು ದೈವಸ್ವರೂಪ ಎಂದು ಹೇಳುವ ನಾವು ನದಿಯನ್ನು ನಡೆಸಿಕೊಳ್ಳಬೇಕಾದ ರೀತಿಯ ಬಗ್ಗೆ ಈ ಜನರಿಂದ ಕಲಿಯಲು ಬಹಳಷ್ಟಿದೆ ಎಂದೂ ಅನಿಸಿತು.

ಹೊಟ್ಟೆ ತುಂಬಾ ನದಿ ನೀರು ಕುಡಿದು ಸಂಗ್ರಹಾಲಯದೊಳಗೆ ಹೋದೆವು. ಅನೇಕ ಅಮೂಲ್ಯ ಸಾಮಾನುಗಳನ್ನು ಬ್ರಿಟಿಷರು ಸಂಗ್ರಹಾಲಯದಲ್ಲಿ ಜೋಡಿಸಿಟ್ಟಿದ್ದಾರೆ. ಇಡೀ ಪ್ರಪಂಚದ ದೇಶಗಳನ್ನೆಲ್ಲಾ ಕೊಳ್ಳೆ ಹೊಡೆದು ತಂದಿದ್ದು ಎಂದು ಮೊದಲಿಗೆ ನನಗನಿಸಿದರೂ ನಮ್ಮ ದೇಶದಲ್ಲಿ ನಮ್ಮದನ್ನು ಉಳಿಸಿಕೊಳ್ಳುವ ಮನೋಭಾವವೇ ಇಲ್ಲದೇ ಸ್ಮಾರಕದಲ್ಲಿ ಹೆಸರು ಕೆತ್ತುವವರ, ಬಂಗಾರದ ಗಟ್ಟಿಗಳನ್ನು ಹಾಸಿಗೆಯಾಗಿಸಿಕೊಳ್ಳುವವರ, ಸರ್ಕಾರಕ್ಕೆ ಸೇರಬೇಕಾದ ಅಮೂಲ್ಯ ವಸ್ತುಗಳನ್ನು ತಮ್ಮ ಬಂಗ್ಲೆಗಳಿಗೆ ಸೇರಿಸಿ ಭದ್ರಪಡಿಸುವವರ ನೆನಪು ಮೂಡಿ ಸದ್ಯ ಇಲ್ಲಾದರೂ ನೋಡಲೆಟುಕುತ್ತಿರುವುದಕ್ಕೆ ಸಮಾಧಾನ ಪಟ್ಟುಕೊಂಡೆ.

ಪ್ರಪಂಚದ ಅಗ್ರಪಟ್ಟಿಯಲ್ಲಿ ಬ್ರಿಟನ್ನಿನ ಅನೇಕ ಮ್ಯೂಸಿಯಂಗಳಿವೆ. ಸಣ್ಣ ಸಣ್ಣ ಊರಿನಲ್ಲೂ ಸಂಗ್ರಹಾಲಯಗಳಿಗೆ ಮನ್ನಣೆ ಕೊಡಲಾಗಿದೆ. ಒಂದು ದೊಡ್ಡ ಪಡಸಾಲೆಯಲ್ಲಿ ಇಡೀ ಆವರಣವನ್ನು ಆವರಿಸುವಂತೆ ಮೇಲಿನಿಂದ ತೂಗುಬಿಟ್ಟಿರುವ ದೈತ್ಯ ಪಕ್ಷಿ ಆರ್ಕಿಯೋಪೆಟರಿಕ್ಸ್‌ನ ಪಳೆಯುಳಿಕೆ, ಥರಾವರಿ ಮಹೋರಗಗಳ ಪಳೆಯುಳಿಕೆ, ಆದಿ ಮಾನವನ ಪಳೆಯುಳಿಕೆ, ಈಜಿಪ್ಟಿನ ಮಮ್ಮಿಗಳು ಬ್ರಿಟನ್‌ನ ಅನೇಕ ಸಂಗ್ರಹಾಲಯವನ್ನು ತುಂಬಿಸಿವೆ. ನೋಡುಗರನ್ನು ಸಂಶೋಧನೆಗಳಿಗೆ ಪ್ರಚೋದಿಸುವ, ಜ್ಞಾನದ ಹಸಿವಿಗೆ ಕಾರಣವಾಗುವ ಸಂಗ್ರಹಾಲಯಗಳಿಗೆ ಅವರು ನೀಡಿರುವ ಮಹತ್ವ ಮೆಚ್ಚುಗೆಗೆ ಅರ್ಹ. ಪ್ರಪಂಚದಲ್ಲೇ ಮೊದಲ ಸಾರ್ವಜನಿಕ ಸಂಗ್ರಹಾಲಯ ಎಂಬ ಹೆಗ್ಗಳಿಕೆಯಿರುವ ಬ್ರಿಟನ್ನಿನ ಸಂಗ್ರಹಾಲಯವನ್ನು ನೋಡಿ ಒಂದೆರಡೇ ದಿನಗಳು ಕಳೆದಿದ್ದರೂ ಇನ್ವರ್‌ನೆಸ್‌ನ ಸಂಗ್ರಹಾಲಯ ಮನದಲ್ಲಿ ಛಾಪು ಮೂಡಿಸಿತು.

ವಾಸ್ತವದಲ್ಲಿ ನೋಡಿದರೆ ನಮ್ಮ ಇಡೀ ದೇಶವೇ ಒಂದು ಮ್ಯೂಸಿಯಂನಂತಿದ್ದು, ಎಲ್ಲೆಂದರಲ್ಲಿ ಮಾಸ್ತಿಕಲ್ಲು, ವೀರಗಲ್ಲು, ಶಿಲಾಶಾಸನಗಳು, ಶಿಲ್ಪಕಲಾ ವೈಭವದ ದೇಗುಲಗಳು, ಕೋಟೆ ಕೊತ್ತಲಗಳು, ಕಲ್ಯಾಣಿಗಳು ಎಲ್ಲವೂ ಸಂಗ್ರಹಯೋಗ್ಯ ಅಮೂಲ್ಯ ರತ್ನಗಳಂತಿದ್ದರೂ, ಅದು ನಮ್ಮದೆಂಬ ಭಾವದ ಕೊರತೆ ನಮ್ಮಲ್ಲಿ ಪ್ರಮುಖ ನ್ಯೂನತೆ. ವಾರಾಂತ್ಯದಲ್ಲಿ ಮಕ್ಕಳನ್ನು ಕರೆದೊಯ್ಯಲು ಮಾಲ್‌ಗಳು, ರೆಸಾರ್ಟ್‌ಗಳು, ಅಮ್ಯೂಸ್‌ಮೆಂಟ್ ಪಾರ್ಕ್‌ಗಳು ಆಕರ್ಷಣೀಯವಾಗಿ, ವಸ್ತು ಸಂಗ್ರಹಾಲಯಗಳು ಮೂಲೆಗುಂಪು ಸೇರಿರುವ ವಿಚಾರ ತಲೆಯಲ್ಲಿ ಒಂದು ಕ್ಷಣ ಮಿಂಚಿ ಮರೆಯಾಯಿತು.

ನಂತರ ನೋಡಿದ ಇನ್ವರ್‌ನೆಸ್‌ನ ಸಸ್ಯೋದ್ಯಾನ ವೈವಿಧ್ಯದಲ್ಲಿ ಉಷ್ಣ ವಲಯದ ಮಳೆಕಾಡುಗಳಿಗೆ ಅಜಗಜಾಂತರವಿದ್ದರೂ ತನ್ನದೇ ರೀತಿಯಲ್ಲಿ ವಿಭಿನ್ನ ಎನಿಸಿತು. ಇನ್ವರ್‌ನೆಸ್ ಕ್ಯಾಸಲ್, ನೆಸ್ ನದಿ, ಸಂಗ್ರಹಾಲಯ, ಬೊಟಾನಿಕಲ್ ಗಾರ್ಡನ್ ಮನ ತಣಿಸಿದ್ದವು.

ಸಹ ಪ್ರಯಾಣಿಕರನ್ನು ಸಂಜೆ ಕೂಡಿಕೊಳ್ಳುವಾಗ ರಾಬರ್ಟ್ ಫ್ರಾಸ್ಟ್‌ನ ಕವನ ಮತ್ತೊಮ್ಮೆ ಮನಸಿನಲ್ಲಿ ಹಾದು ಖುಷಿಯಿಂದ ಹೆಜ್ಜೆ ಹಾಕಿದೆ.

ಪ್ರತಿಕ್ರಿಯಿಸಿ: feedback@sudha.co.in



ಮ್ಯೂಸಿಯಂನ ಇಡೀ ಪಡಸಾಲೆಯನ್ನು ಆವರಿಸುವಂತೆ ಮೇಲಿನಿಂದ ತೂಗುಬಿಟ್ಟಿರುವ ದೈತ್ಯ ಪಕ್ಷಿ ಆರ್ಕಿಯೋಪೆಟರಿಕ್ಸ್‌ನ ಪಳೆಯುಳಿಕೆ